<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ</u>

<u>ನ್ಯಾಯಾಲಯ, ಮೂಡಿಗೆರೆ.</u>

**O.S.5/2022**

| | | |
|---|---|---|
| ಸಾಕ್ಷಿದಾರರ ಹೆಸರು | ಉದಯ ಡಿ.ಪಿ. | ಸಿ.ಡಬ್ಲ್ಯೂಃ 1 |
| ತಂದೆಯ ಹೆಸರು | ಪ್ರಶಾಂತ್ | |
| ವಯಸ್ಸು | 35 ವರ್ಷ | |
| ಉದ್ಯೋಗ | ಭೂ ಮಾಪಕರು, ಮೂಡಿಗೆರೆ | |
| ವಾಸ ಸ್ಥಳ | ಮೂಡಿಗೆರೆ | |

ದಿನಾಂಕಃ 09.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಖ್ಯ ವಿಚಾರಣೆಃ</u>**

1. ಈ ಪ್ರಕರಣದಲ್ಲಿ ಸ್ಥಳ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಮೂಡಿಗೆರೆ ಎ.ಡಿ.ಎಲ್.ಆರ್ ರವರು ನನ್ನನ್ನು ನೇಮಕ ಮಾಡಿರುತ್ತಾರೆ. ಅದರಂತೆ ನಾನು ವಾದಿ ಮತ್ತು ಪ್ರತಿವಾದಿಗಳಿಗೆ ದಿಃ 05.04.2025 ರಂದು ನೋಟೀಸು ನೀಡಿರುತ್ತೇನೆ. ದಿಃ 16.04.2025 ರಂದು ಸ್ಥಳಕ್ಕೆ ಹಾಜರಾಗಿ ಅಳತೆ ಕಾರ್ಯವನ್ನು ಪೂರೈಸಿರುತ್ತೇನೆ. ಅಳತೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಿದ್ದರು. ಸರ್ವೆ ನಂಬರ್ 129/1 ರಿಂದ ಸರ್ವೆ ನಂಬರ್ 129/14 ರವರೆಗಿನ ಆಸ್ತಿಗಳನ್ನು ಅಳತೆ ಮಾಡಿ ನಕ್ಷೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸರ್ವೆ ನಂಬರ್ 129/5 ಮತ್ತು ಸರ್ವೆ ನಂಬರ್ 129/9 ರ ಆಸ್ತಿಗಳನ್ನು ಅಳತೆ ಮಾಡಿ ನಕ್ಷೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರತಿವಾದಿಗಳು ನೀಡಿರುವ ಸೂಚನಾವಳಿಗಳಿಗೆ ಉತ್ತರ ನೀಡಿರುತ್ತೇನೆ. ಸ್ಥಳದಲ್ಲಿ ಮಹಜರ್ ಮಾಡಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ.

2. ವಾದಿ ಮತ್ತು ಪ್ರತಿವಾದಿಗಳಿಗೆ ನೀಡಿರುವ ನೋಟೀಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಸಿ.1 ಎಂದು ಗುರುತಿಸಲಾಯಿತು, 3 ಅಂಚೆ ರಸೀದಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿ.ಪಿ.2 ರಿಂದ 4 ಎಂದು, ಸರ್ವೆ ನಕ್ಷೆಗಳನ್ನು

ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಸಿ.5 ಮತ್ತು 6 ಎಂದು ಗುರುತಿಸಲಾಯಿತು, ವಾದಿಯರ ಮತ್ತು ಪ್ರತಿವಾದಿಯರ ಪ್ರಶ್ನಾವಳಿಯ ಉತ್ತರಗಳನ್ನು ನಿ.ಸಿ.7 ಮತ್ತು 8 ಎಂದು ಗುರುತಿಸಲಾಯಿತು, ಮಹಜರ್ ಅನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಸಿ.9 ಎಂದು ಗುರುತಿಸಲಾಯಿತು, ನ್ಯಾಯಾಲಯಕ್ಕೆ ಸಲ್ಲಿಸಿದ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿ.ಸಿ.10 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀ ಎಂ.ವಿ.ಜೆ ವಕೀಲರಿಂದ – ಪ್ರತಿವಾದಿಯರ ಪರವಾಗಿ</u>

3. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.೯.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿನಾಂಕಃ 17.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು ಶ್ರೀ ಎಂ.ವಿ.ಜೆ ವಕೀಲರಿಂದ – ಪ್ರತಿವಾದಿಯರ ಪರವಾಗಿ</u>

4. ನಾನು ಸರ್ವೆ ಕಾರ್ಯಕ್ಕೆ ಹೋಗುವ ಮೊದಲು ನ್ಯಾಯಾಲಯದಿಂದ ಯಾವುದೇ ದಾಖಲೆಗಳನ್ನು ಪಡೆದುಕೊಂಡು ಹೋಗಿಲ್ಲ. ಸರ್ವೆ ನಂಬರ್ 129 ರಲ್ಲಿ ಎಂ. ಲಕ್ಷ್ಮಣಗೌಡ ಬಿನ್ ಮೆಣಸೇಗೌಡ ರವರಿಗೂ ಸಹ ಜಮೀನು ಇದೆ ಎಂದರೆ ಸರಿ. ನಾನು ಅಳತೆ ಮಾಡಲು ಹೋದ ಜಾಗದ ಪಕ್ಕಾ ಪೋಡಿ ಸರಿ ಇಲ್ಲ ಎಂದು ಹಿಂದೆ ಡಿ.ಡಿ.ಎಲ್.ಆರ್ ನ್ಯಾಯಾಲಯದಲ್ಲಿ ವಾದಿಯರು ಮತ್ತು ಒಟ್ಟು 13 ಜನರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಡಿ.ಡಿ.ಎಲ್.ಆರ್ ನ್ಯಾಯಾಲಯದಲ್ಲಿ ಇರುವ ಪ್ರಕರಣವನ್ನು ಪರಿಗಣಿಸಿ ಅಳತೆ ಕಾರ್ಯವನ್ನು ಮಾಡಬೇಕು ಎಂದು memo of instruction ನಲ್ಲಿ ಪ್ರತಿವಾದಿಯರು ತಿಳಿಸಿದ್ದರು ಎಂದರೆ ಸರಿಯಲ್ಲ. ನಿ.ಡಿ.6 ಸರ್ವೆ ನಂಬರ್ 129 ಕ್ಕೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ನಿ.ಡಿ.6 ಸಾರ್ವಜನಿಕ ದಾಖಲೆ ಎಂದರೆ ಸರಿ. ನಿ.ಡಿ.6 ರಲ್ಲಿ 4 ಮನೆಗಳು ಇರುವ ಚಿಹ್ನೆಗಳನ್ನು ಕಾಣಿಸಿದ್ದಾರೆ ಎಂದರೆ ಸರಿ. ನಿ.ಡಿ.6 ರಲ್ಲಿ "L" ಆಕಾರದಲ್ಲಿ ಕಾಣಿಸಿರುವ ಗುರುತುಗಳು ಕಾಫಿ ಗಿಡಗಳು ಆಗಿರುತ್ತವೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನಿ.ಸಿ.6 ನಕ್ಷೆಯಲ್ಲಿ ನಾನು ನಿ.ಡಿ.6 ರಲ್ಲಿ ಕಾಣಿಸಿರುವಂತೆ ಮನೆಗಳನ್ನು ಕಾಣಿಸಿಲ್ಲ ಎಂದರೆ ಸಾಕ್ಷಿ ನಾನು ಅಳತೆ ಕಾರ್ಯಕ್ಕೆ ಹೋದಾಗ ಮನೆಗಳು ಇರಲಿಲ್ಲ ಎಂದು ನುಡಿಯುತ್ತಾರೆ. ನಿ.ಸಿ.6 ರಲ್ಲಿ ಕಾಣಿಸಿರುವ ಹಸಿರು ಬಣ್ಣದ ಗುರುತಿನಲ್ಲಿ ಪ್ರತಿವಾದಿಗೆ ಸೇರಿದ ಮನೆ ಅನಾಧಿಕಾಲದಿಂದಲು ಇತ್ತು, ಈಗಲು ಇದೆ ಎಂದರೆ ಸರಿಯಲ್ಲ. 2000 ಇಸವಿಗೂ ಹಿಂದೆ ವಿಭಾಗ ಮಾಡಿಕೊಳ್ಳುವಾಗ ನಕ್ಷೆಯ ಅವಶ್ಯಕತೆ ಇರಲಿಲ್ಲ ಎಂದರೆ ಸರಿ.

5. ನಿ.ಸಿ.6 ರಲ್ಲಿ ಪ್ರತಿವಾದಿಗೆ ಇರುವ 1 ಎಕರೆ 30 ಗುಂಟೆ ಜಮೀನನ್ನು ಬಣ್ಣದ ಗುರುತಿನಿಂದ ಕಾಣಿಸಿಲ್ಲ ಎಂದರೆ ಸರಿ. ವಾದಿಯ ಮಾತನ್ನು ಕೇಳಿ ನಿ.ಸಿ.6 ಅನ್ನು ಕಚೇರಿಯಲ್ಲಿಯೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಸಿ.6 ರಲ್ಲಿ ಕಾಣಿಸಿರುವಂತೆ ಸ್ಥಳದಲ್ಲಿ ವಾಸ್ತವಾಂಶ ಇಲ್ಲ ಎಂದರೆ ಸರಿಯಲ್ಲ. ವಾದಿ

ಮತ್ತು ಪ್ರತಿವಾದಿಯರನ್ನು ಹೊರತುಪಡಿಸಿ ಸರ್ವೆ ನಂಬರ್ 129 ರಲ್ಲಿ ಇರುವ 11 ಜನರು ಸ್ಥಳದಲ್ಲಿ ಇದ್ದರಾ ಎಂದರೆ ಸಾಕ್ಷಿ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ನೈಜ ವರದಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ವರದಿ ನಮ್ಮ ಕಚೇರಿಯಲ್ಲಿ ಇರುವ ದಾಖಲೆಗೆ ಅನುಗುಣವಾಗಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ